

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಅರಿವಿಂಗೆ ಹಿರಿದು ಕಿರಿದುಂಟೇ?

ಭಾರತೀಯ ಪರಂಪರೆಯಲ್ಲಿ ಗುರುವಿಗೆ - ಧರ್ಮಗುರುವಿರಲಿ ಅಥವಾ ವಿದ್ಯಾಗುರುವಿರಲಿ, ಅತ್ಯಂತ ಮಹತ್ವದ ಸ್ಥಾನವಿದೆ. 'ಶಿವಪಥವನರಿವರೆ ಗುರುಪಥವೇ ಮೊದಲು' ಎಂದು ಬಸವಣ್ಣನವರು ಹೇಳಿದರೆ 'ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ' ಎಂದು ಪುರಂದರದಾಸರು ಹಾಡಿದ್ದಾರೆ. ಇಲ್ಲಿ 'ಗುರುವಿನ ಗುಲಾಮ' ಎಂದರೆ ಕಿಂಕರಭಾವ ಎಂದರ್ಥವೇ ಹೊರತು ಅದು ಬೌದ್ಧಿಕ ಅಥವಾ ವೈಚಾರಿಕ ಗುಲಾಮಗಿರಿ ಅಲ್ಲ. ಹಿಂದಿನ ಕಾಲದ ಸಮಾಜದಲ್ಲಿ ಗಣ್ಯವ್ಯಕ್ತಿಯ ಗುಣವಿಶೇಣಗಳಲ್ಲಿ 'ಗುರುಭಕ್ತಿಪರಾಯಣ' ಎಂಬುದೂ ಸೇರಿತ್ತು. ರಾಜರ ಆಳ್ವಿಕೆಯಲ್ಲಿ ಪಡೆಯುತ್ತಿದ್ದ 'ರಾಜಸೇವಾಸಕ್ತ' ಎಂಬ ಬಿರುದು ವ್ಯಕ್ತಿಯ ಸಾಮಾಜಿಕ ಸ್ಥಾನಮಾನವನ್ನು ಸೂಚಿಸುತ್ತಿದ್ದಂತೆ ಗುರುಭಕ್ತಿಪರಾಯಣ ಎಂಬುದು ಧರ್ಮಭೀರು ಎಂಬ ಅರ್ಥದಲ್ಲಿ ಬಳಕೆಯಾಗುತ್ತಿತ್ತು.

ಗುರುವನ್ನು ದೈವಸ್ವರೂಪಿ ಅಥವಾ ದೈವಾಂಶ ಸಂಭೂತ ಎಂದು ಭಾವಿಸುವುದಲ್ಲದೆ ಒಂದು ಹೆಜ್ಜೆ ಮುಂದೆ ಹೋಗಿ ಗುರು ಸಾಕ್ಷಾತ್ ಪರಬ್ರಹ್ಮ ಎಂದು ಬಣ್ಣಿಸಲಾಗಿದೆ. 'ಹರ ಮುನಿದರೆ ಗುರು ಕಾಯ್ವನು' ಎಂಬ ಅಭಯ ಶಿಷ್ಯನಿಗೆ ಇದೆ. ತ್ರಿವಿಧ ದಾಸೋಹದಲ್ಲಿ ಗುರು ಸೇವೆಯೂ ಸಹ ಒಂದು. ಈ ರೀತಿಯ ವಿಶೇಷ ಗೌರವಾದರಗಳಿಗೆ ಪಾತ್ರರಾದ ಗುರುಗಳನ್ನು ಪ್ರಶ್ನೆ ಮಾಡುವುದೇ ಉದ್ಧಟತನ ಎಂಬಂತೆ ಭಾವಿಸಲಾಗುತ್ತಿದೆ. ಮಕ್ಕಳು ಹಿರಿಯರಲ್ಲಿ ಪ್ರಶ್ನೆ ಕೇಳುವುದನ್ನು ಬಹಳಷ್ಟು ಜನ ಸಹಿಸುವುದಿಲ್ಲ. ಪ್ರಾಯಶಃ ಆ ಪ್ರಶ್ನೆಗೆ ಉತ್ತರ ತಮಗೆ ಗೊತ್ತಿಲ್ಲದಿದ್ದರೆ, ಹೇಳಲು ಇಷ್ಟವಿಲ್ಲದಿದ್ದರೆ ಅಥವಾ ಮುಜುಗರವಾಗುವಂತಿದ್ದರೆ ಮಗುವಿನ ತಲೆಯ ಮೇಲೆ ಮೊಟುಕಿ 'ಚೋಟುದ್ದ ಇದ್ದೀಯ, ನಿನ್ನ ಬಾಯಲ್ಲಿ ಇಂಥ ಪ್ರಶ್ನೆಯಾ, ಮುಠ್ಠಾಳಾ!' ಎಂದು ಬಾಯಿಮುಚ್ಚಿಸುವವರೇ ಹೆಚ್ಚು. ಆದರೆ ಪ್ರಶ್ನೆ ಮಾಡುವುದು ಖಂಡಿತಾ ಉದ್ಧಟನತವಲ್ಲ, ಅದು ಜ್ಞಾನದ ಜಿಜ್ಞಾಸೆಯ ಪ್ರತೀಕ.

ಸಾಮಾಜಿಕ ನಡವಳಿಕೆಯಲ್ಲಿ ಗುರುಹಿರಿಯರನ್ನು ಪ್ರಶ್ನಿಸಬಾರದೆಂಬುದು ಒಂದು ಶಿಷ್ಟಾಚಾರವಾಗಿದ್ದರೂ ಗುರುಗಳು ಹೇಳಿದ್ದನ್ನೆಲ್ಲಾ ಯಥಾವತ್ತಾಗಿ ಸ್ವೀಕರಿಸಬೇಕು, ಪ್ರಶ್ನೆಮಾಡಬಾರದು ಎಂಬುದು ಭಾರತೀಯ ಧರ್ಮಬೋಧೆಯ ಧೋರಣೆಯಾಗಿರಲಿಲ್ಲ. ಉದಾಹರಣೆಗೆ ಭಗವದ್ಗೀತೆಯನ್ನೇ ತೆಗೆದುಕೊಳ್ಳುವುದಾದರೆ ಅಲ್ಲಿ 'ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ' (4.34) ಎಂದು ಹೇಳಲಾಗಿದೆ. ಪ್ರಶ್ನೆಗಳನ್ನು ಹಾಕಿ ಮನವರಿಕೆ ಮಾಡಿಕೊಳ್ಳಬೇಕು ಎನ್ನುತ್ತದೆ ಗೀತೆ. ಪ್ರಣಿಪಾತ ಎಂದರೆ ವಿಧೇಯತೆ, ಗುರುಸೇವೆ, ಗೌರವ. ಅದು ಗುರುಗಳು ಹೇಳಿದ್ದನ್ನೆಲ್ಲಾ ಪ್ರಶ್ನಿಸದೆ ಒಪ್ಪಿಕೊಳ್ಳಬೇಕೆಂಬ ಕಟ್ಟುಪಾಡು ಅಲ್ಲ. ವ್ಯಕ್ತಿಯ ಮೇಲಿನ ಗೌರವ ಬೇರೆ, ವಿಚಾರಗಳ ಮೇಲಿನ ಗೌರವ ಬೇರೆ. ಪ್ರಶ್ನೆಗಳನ್ನು ಹಾಕುವ ರೀತಿ ಅವಿಧೇಯತೆಯ ಲಕ್ಷಣವಾಗಬಹುದೇ ಹೊರತು ಪ್ರಶ್ನೆಗಳನ್ನು ಕೇಳುವುದೇ ಅವಿಧೇಯತೆಯಲ್ಲ. ಅದಕ್ಕೆ ಕಾರಣ ಗುರು ಒಬ್ಬ ವ್ಯಕ್ತಿಯಲ್ಲ, ಜ್ಞಾನದ ಸಂಕೇತ, ಅದೊಂದು ತತ್ವ.

ವ್ಯಕ್ತಿಯ ಸ್ವತಂತ್ರ ಚಿಂತನೆ, ಸ್ವತಂತ್ರ ವಿಚಾರಧಾರೆಗೆ ವೇದೋಪನಿಷತ್‌ಗಳು ಪ್ರಾಶಸ್ತ್ಯ ನೀಡಿವೆ. ಈ ಹಿನ್ನೆಲೆಯಲ್ಲಿ ಗುರುವಿನ ಮಹಿಮೆಯನ್ನು ಎಷ್ಟೇ ಕೊಂಡಾಡಿದರೂ ಶಿಷ್ಯನ ಜ್ಞಾನ ಗುರುವಿನ ಜ್ಞಾನಕ್ಕಿಂತ ಕಡಿಮೆ ಎಂದು ಪರಿಭಾವಿಸಿಲ್ಲ. ವಯೋಮಾನದಲ್ಲಿ ಗುರುಶಿಷ್ಯರಲ್ಲಿ ಅಪಾರ ಅಂತರವಿರಬಹುದು. ಆದರೆ ಶಿಷ್ಯನ ಜ್ಞಾನ ಕನಿಷ್ಠವೆಂದಾಗಲೀ ಗುರುವಿನ ಜ್ಞಾನ ಶ್ರೇಷ್ಠ ಎಂದಾಗಲೀ ತಾರತಮ್ಯ ಮಾಡುವಂತಿಲ್ಲ. ಶಿಷ್ಯನಾದವನು ತಾನು ಹೇಳಿದ್ದಕ್ಕೆಲ್ಲಾ ಕೋಲೆ ಬಸವನಂತೆ ತಲೆಹಾಕುವವನಾಗಿರಬೇಕೆಂಬ ನಿರೀಕ್ಷೆ ಪ್ರಾಚೀನ ಕಾಲದ ಗುರುವಿಗೆ ಇರುತ್ತಿರಲಿಲ್ಲ. 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬ ಆಶಯವನ್ನು ಇಟ್ಟುಕೊಳ್ಳುತ್ತಿದ್ದರು. ತನ್ನಿಂದ ಜ್ಞಾನವನ್ನು ಪಡೆದ ಶಿಷ್ಯನು ಜ್ಞಾನಮೇರುವಾಗಿ ತನಗಿಂತ ಎತ್ತರಕ್ಕೆ ಬೆಳೆಯಬೇಕು, ಅವನೇ ತನ್ನನ್ನು ಮುಂದೆ ಸೋಲಿಸುವಂತಾಗಬೇಕು ಎಂದು ಹಾರೈಸುತ್ತಿದ್ದರು. ದೀಪದಿಂದ ಬೆಳಕನ್ನು ದಾನವಾಗಿ ಪಡೆದ ಕಿರುಹಣತೆ ಮುಂದೊಂದು ದಿನ ಜಗವನ್ನು ಬೆಳಗುವ ಸೂರ್ಯನಾಗಬೇಕೆಂಬ ಹಂಬಲ ಗುರುವಿನಲ್ಲಿರುತ್ತಿತ್ತು. ಶಿಷ್ಯ ಗುರುವಿಗಿಂತ ಹೆಚ್ಚಿನ ಜ್ಞಾನ ಸಂಪಾದನೆ ಮಾಡಿದರೆ ಅವನು ಗುರುವಿನಷ್ಟೇ ಗೌರವಕ್ಕೆ ಪಾತ್ರನಾಗುತ್ತಿದ್ದ.

ವಿಜ್ಞಾನ ವಿಕಾಸವಾಗಿರುವುದೇ ಕಾಲಮಾನದಲ್ಲಿ ನಂತರ ಬಂದವರ ಸಂಶೋಧನೆಗಳಿಂದ. 'ಏನು, ಏಕೆ, ಹೇಗೆ?' ಎಂಬ ಪ್ರಶ್ನೆಗಳೇ ಇರದಿದ್ದರೆ ಅದು ಇನ್ನೂ ತೆವಳುವ ಹಂತದಲ್ಲೇ ಇರುತ್ತಿತ್ತು. ಭೂಮಿಯು ಹಾಸಿದ ಚಾಪೆಯಂತೆ ಚಪ್ಪಟೆಯಾಗಿದೆ, ಸೂರ್ಯನೇ ಭೂಮಿಯನ್ನು ಸುತ್ತುತ್ತಾನೆ ಎಂದು ನಂಬಿದ ಕಾಲವಿತ್ತು. ಈಗ ಚಿಕ್ಕಮಗುವಿಗೂ ಗೊತ್ತು : ಭೂಮಿ ಗುಂಡಗಿದೆ, ಅದು ಸೂರ್ಯನನ್ನು ಅಂಡಾಕಾರದ ಕಕ್ಷೆಯಲ್ಲಿ ವರ್ಷಕ್ಕೊಂದು ಸಲ ಸುತ್ತುತ್ತದೆ. ಸೂರ್ಯಗ್ರಹಣ ಮತ್ತು ಚಂದ್ರಗ್ರಹಣಗಳಾಗುವುದು ರಾಹು ಕೇತುಗಳೆಂಬ ಕಾಲ್ಪನಿಕ ಗ್ರಹಗಳಿಂದಲ್ಲ; ಅದೊಂದು ಆಗಸದಲ್ಲಿ ನಡೆಯುವ ಅಚ್ಚರಿಯ ನೆರಳು ಬೆಳಕಿನಾಟ!

ಈ ರೀತಿಯ ವೈಜ್ಞಾನಿಕ ದೃಷ್ಟಿ ನಮ್ಮ ದೇಶದ ಸಂಸ್ಕೃತ ವ್ಯಾಕರಣಶಾಸ್ತ್ರದಲ್ಲಿದೆ. ಸಂಸ್ಕೃತ ವ್ಯಾಕರಣವನ್ನು ಅತ್ಯಂತ ಶಾಸ್ತ್ರೀಯವಾಗಿ, ವೈಜ್ಞಾನಿಕವಾಗಿ, ಸೂತ್ರಬದ್ಧವಾಗಿ ಕ್ರಿ.ಪೂ 5 ನೇ ಶತಮಾನದಲ್ಲಿದ್ದ ಪಾಣಿನಿ ಮಹರ್ಷಿಯು ರಚಿಸಿದ್ದಾರೆ. ಎಂಟು ಅಧ್ಯಾಯಗಳುಳ್ಳ ಅವರ ವ್ಯಾಕರಣ ಗ್ರಂಥವೇ 'ಅಷ್ಟಾಧ್ಯಾಯೀ'. ಪಾಣಿನಿಯ ನಂತರವೂ ಸಹ ಅಷ್ಟಾಧ್ಯಾಯೀ ಕುರಿತ ಆಳವಾದ ಅಧ್ಯಯನವನ್ನು ಮಾಡಲಾಗಿದೆ. ಪಾಣಿನಿಯ ಸೂತ್ರಗಳನ್ನೇ ಆಧರಿಸಿ ಮಾಡಿದ ಅಧ್ಯಯನದಲ್ಲಿ ಕೆಲವು ಸೂತ್ರಗಳು ಅಪೂರ್ಣವಾಗಿರುವುದನ್ನು ಕಾಲಮಾನದಲ್ಲಿ ನಂತರ ಬಂದ ಕಾತ್ಯಾಯನ (ಕ್ರಿ.ಪೂ 3)

- 2 -

ಗುರುತಿಸಿ ತನ್ನ ವಾರ್ತಿಕಗಳಲ್ಲಿ ತಿದ್ದುಪಡಿ ಮಾಡಿದ್ದಾನೆ. ಕಾತ್ಯಾಯನನ ನಂತರ ಬಂದ ಪತಂಜಲಿ ಮಹರ್ಷಿ (ಕ್ರಿ.ಪೂ 2) ಪಾಣಿನಿಯ ಸೂತ್ರಗಳ ಮೇಲೆ ಮಹಾಭಾಷ್ಯ ಎಂಬ ಉದ್‌ಗ್ರಂಥವನ್ನು ಬರೆದಿದ್ದಾರೆ. ಈ ಮೂವರನ್ನು ವ್ಯಾಕರಣ ಶಾಸ್ತ್ರಗ್ರಂಥಗಳಲ್ಲಿ 'ಮುನಿತ್ರಯ'ರು ಎಂದು ಗೌರವಿಸಲಾಗಿದೆ. 16ನೇ ಶತಮಾನದ ಭಟ್ಟೋಜಿ ದೀಕ್ಷಿತರು ತಮ್ಮ 'ಸಿದ್ಧಾಂತಕೌಮುದೀ' ಗ್ರಂಥವನ್ನು 'ಮುನಿತ್ರಯಂ ನಮಸ್ಕೃತ್ಯ ತದೂಕ್ತೀಃ ಪರಿಭಾವ್ಯ ಚ' ಎಂದೇ ಆರಂಭಿಸುತ್ತಾರೆ. ಈ ಮೂವರೂ ಮುನಿಗಳಲ್ಲಿ ಮತಭೇದ ಉಂಟಾದರೆ **'ಯಥೋತ್ತರಂ ಮುನೀನಾಂ ಪ್ರಾಮಾಣ್ಯಮ್'** ಅಂದರೆ ನಂತರದ ಮುನಿಗಳು ಹೇಳಿರುವುದೇ ಸ್ವೀಕಾರಾರ್ಹವೆಂದು ಪರಿಗಣಿಸಲಾಗಿದೆ. ಇದರ ಪ್ರಕಾರ ಪಾಣಿನಿ ಮತ್ತು ಕಾತ್ಯಾಯನರ ಮಧ್ಯೆ ಮತಭೇದ ಉಂಟಾದರೆ ಕಾತ್ಯಾಯನ ಹೇಳಿದ್ದೇ ಸರಿ. ಪಾಣಿನಿ, ಕಾತ್ಯಾಯನ ಮತ್ತು ಪತಂಜಲಿ ಈ ಮೂವರ ಮಧ್ಯೆ ಮತಭೇದ ಉಂಟಾದರೆ ಕೊನೆಯವರಾದ ಪತಂಜಲಿಯ ಮಾತೇ ಅಂತಿಮ ಎಂದು ಭಾವಿಸಬೇಕು. ಇದು ವೈಜ್ಞಾನಿಕವಾಗಿ ಸರಿ. ಹಿರಿದಾದ ಅನುಭವವುಳ್ಳವರು ಎಂಬ ಕಾರಣಕ್ಕಾಗಿ ಹಿರಿಯರನ್ನು ಕಿರಿಯರಿಗಿಂತ ಹೆಚ್ಚು ಗೌರವಿಸಲಾಗುತ್ತದೆ. ಆದರೆ ಹಿರಿಯರ ಎಲ್ಲ ಜ್ಞಾನವನ್ನು ಕಿರಿಯರು ಮೈಗೂಡಿಸಿಕೊಂಡು ಬೆಳೆದರೆ ಹಿರಿಯರ ಮಾತಿಗಿಂತ ಕಿರಿಯರ ಮಾತಿಗೆ ಹೆಚ್ಚು ಮನ್ನಣೆ ನೀಡುವ ವೈಜ್ಞಾನಿಕ ದೃಷ್ಟಿಯನ್ನು ಭಾರತೀಯ ಶಾಸ್ತ್ರಗ್ರಂಥಗಳಲ್ಲಿ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ನೆನಪಿಗೆ ಬರುವ ಅಲ್ಲಮಪ್ರಭುಗಳ ಮನೋಜ್ಞವಾದ ನುಡಿ:

**"ಹಿರಿಯರಾದರೇನು ಕಿರಿಯರಾದರೇನು, ಅರಿವಿಂಗೆ ಹಿರಿದು ಕಿರಿದುಂಟೇ?"**

25.10.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑